**ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾಯಿಕ ದಂಡಾಧಿಕಾರಿಗಳರವರ ನ್ಯಾಯಾಲಯ, ಹೆಚ್.ಡಿ.ಕೋಟೆ**

**ಸಿ.ಸಿ. ನಂ. 54/2022**

**ಸಾಕ್ಷಿಗೆ ದಿನಾಂಕ 18.2.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಸಾಕ್ಷಿದಾರರ ಹೆಸರು | : | ಅಕ್ರಂ ಪಾಷ | ಪಿ.ಡಬ್ಲ್ಯೂ-4 |
| ತಂದೆಯ/ಗಂಡನ ಹೆಸರು | : | ಬಾಬಜಾನ್ | ಸಿ.ಡಬ್ಲ್ಯೂ-9 |
| ವಯಸ್ಸು | : | 57 | |
| ಉದ್ಯೋಗ | : | ವ್ಯಾಪಾರ | |
| ವಾಸಸ್ಥಳ | : | ಸರಗೂರು | |

**ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಈಗ ನೋಡುತ್ತಿರುವ ದಾಖಲೆಯಲ್ಲಿರುವ ಸಹಿ ನನ್ನದೇ ಆಗಿರುತ್ತದೆ. ಈಗ ಸುಮಾರು 3 ವರ್ಷದ ಹಿಂದೆ ಹೆಚ್.ಡಿ.ಕೋಟೆ ಪೋಲಿಸರು ಅಪಘಾತಕ್ಕೆ ಸಂಬಂಧಪಟ್ಟ ಈಗ ನೋಡುತ್ತಿರುವ ನಿಪಿ10 ಮತ್ತು ನಿಪಿ11 ಭಾವಚಿತ್ರಗಳಲ್ಲಿರುವ ವಾಹನವನ್ನು ಅಮಾನತ್ತುಪಡಿಸಿಕೊಂಡು ಠಾಣೆಯಲ್ಲಿ ಅಮಾನತ್ತು ಪಂಚನಾಮೆಯನ್ನು ಮಾಡಿರುತ್ತಾರೆ. ಸಾಕ್ಷಿದಾರರು ಅಮಾನತ್ತು ಪಂಚನಾಮೆಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ12 ಎಂದು, ಸಾಕ್ಷಿಯ ಸಹಿಯನ್ನು ನಿಪಿ12 ಎ ಎಂದು ಗುರುತಿಸಲಾಯಿತು.

**ಪಾಟೀಸವಾಲುಃ ಆರೋಪಿತರ ಪರ ಶ್ರೀ ಎಸ್.ಕೆ.ಎಸ್ ವಕೀಲರಿಂದಃ**

ನನಗೆ ನಿಪಿ12 ರಲ್ಲಿ ಬರೆದಿರುವ ವಿಚಾರ ಗೊತ್ತಿರುವುದಿಲ್ಲ. ನಿಪಿ12 ನ್ನು ಯಾರು ಹೇಳಿ ಬರೆಸಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ಮಹಜರು ಮಾಡಿದ ಸಮಯದಲ್ಲಿ ಯಾರೆಲ್ಲ ಹಾಜರಿದ್ದರು ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ಸಹಿ ಮಾಡಲು ಹೇಳಿದ್ದರಿಂದ ಸಹಿ ಮಾಡಿರುತ್ತೇನೆ ಎಂದರೆ ಸರಿ. ಮಹಜರು ಮಾಡಿದ್ದಾರೆ ಎಂದು ಹೇಳುವ ಸಮಯದಲ್ಲಿ ಪೋಲಿಸರು ನನಗೆ ನೋಟಿಸನ್ನು ನೀಡಿರುವುದಿಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಮಹಜರನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸಾ ಸ ಇ ಒ.,

ಹಿರಿಯ ಸಿ.ಜೆ ಮತ್ತು ಜೆ.ಎಂ.ಎಫ್.ಸಿ.,
ಹೆಚ್.ಡಿ.ಕೋಟೆ